# ಸರಯೂಬಾಲಾ ಸೇನ್

❑ ಪ್ರವ್ರಾಜಿಕಾ ಧರ್ಮಪ್ರಾಣಾ,

**"ಮಾಯೇರ್ ಕಥಾ" (ಶ್ರೀಮಾತೆಯವರ ವಚನಾಮೃತ) ಎಂಬ ಎರಡು ಸಂಪುಟಗಳ ಪ್ರಥಮ ಭಾಗದ ಸಂಕಲನ ಮಾಡಿರುವ ಶ್ರೀಮತಿ ಸರಯೂಬಾಲಾಸೇನ್‌ರ ವ್ಯಕ್ತಿತ್ವದ ಸೂಕ್ಷ್ಮ ಪರಿಚಯ ಮಾಡಿಕೊಟ್ಟಿರುವ ಪ್ರವ್ರಾಜಿಕಾ ಧರ್ಮಪ್ರಾಣಾ ಅವರು ಅರುಣಾಚಲ ಪ್ರದೇಶದಲ್ಲಿನ ತಿರಾಪ್ ಜಿಲ್ಲೆಯ ಖೋನ್ಸಾದ ರಾಮಕೃಷ್ಣ ಶಾರದಾ ಮಿಷನ್‌ನ ಸಂನ್ಯಾಸಿನಿಯಾಗಿರುವರು.**

ಅವತಾರ ಪುರುಷರನ್ನು ಅರಿಯುವುದು ನಿಜವಾಗಿಯೂ ತುಂಬ ಕಠಿಣವಾದ ವಿಷಯ. ಅವರು ಜೊತೆಯಲ್ಲಿರುವವರ ಹತ್ತಿರ ಸಾಧಾರಣ ಮನುಷ್ಯರಂತೆ ವರ್ತಿಸುತ್ತಾರೆ. ಅವರೇ ಸ್ವತಃ ಕೃಪೆ ಮಾಡಿದಲ್ಲದೆ ಅವರನ್ನು ಅರಿಯಲು ಸಾಧ್ಯವಿಲ್ಲ. ಸಾಧಕನು ಆ ಮಹಾಕೃಪೆಗೆ ತಕ್ಕ ಪಾತ್ರನೂ ಆಗಿರಬೇಕು. ಸ್ವಾಮಿ ವಿವೇಕಾನಂದರು ಕೂಡ ಅವತಾರ ವರಿಷ್ಠರಾದ ಶ್ರೀರಾಮಕೃಷ್ಣರನ್ನು ಅವರ ಕೊನೆಯ ಗಳಿಗೆಯವರೆಗೂ ಪರೀಕ್ಷಿಸಿದರು. ಸ್ವಾಮಿ ಅದ್ವೈತಾನಂದರು ಹೇಳುತ್ತಿದ್ದರು : "ಶ್ರೀರಾಮಕೃಷ್ಣರನ್ನು ನಾನು ಪ್ರಥಮವಾಗಿ ಭೇಟಿಮಾಡಿದಾಗ ನನಗೆ ಅವರಲ್ಲಿ ಯಾವ ವಿಶೇಷವೂ ಕಾಣಲಿಲ್ಲ. ಮುಂದೆ ಅವರ ಬಳಿ ಹೋಗುವುದಿಲ್ಲವೆಂದೇ ತೀರ್ಮಾನಿಸಿದ್ದೆ. ಆಮೇಲೆ ಒಂದು ದಿನ ಇನ್ನೊಬ್ಬ ಭಕ್ತರ ಜೊತೆಯಲ್ಲಿ ಹೋದಾಗ ಶ್ರೀರಾಮಕೃಷ್ಣರ ಅಪಾರ ಕೃಪೆಯಿಂದ ಅವರು ಯಾರೆಂಬುದರ ಅರಿವು ನನ್ನಲ್ಲಿ ಮೂಡಲು ಸಾಧ್ಯವಾಯಿತು. ಆಮೇಲೆ ಒಂದು ನಿಮಿಷವೂ ಅವರನ್ನು ಅಗಲಿರಲು ಸಾಧ್ಯವಾಗಲಿಲ್ಲ...."

ಶ್ರೀರಾಮಕೃಷ್ಣರ ಲೀಲಾನಾಟಕದಲ್ಲಿ ಭಾಗವಹಿಸಲು ಶ್ರೀಮಾತೆ ಶಾರದಾದೇವಿಯ ರೂಪದಲ್ಲಿ ಬಂದ ಸಾಕ್ಷಾತ್ ಜಗದಂಬೆಯನ್ನು, ಆ ಮಹಾಮಾತೆಯನ್ನು ಎಷ್ಟು ಜನರು ಅರಿತಿದ್ದರು? ತನ್ನ ದಿವ್ಯಸ್ವರೂಪವನ್ನು ಸಂಪೂರ್ಣವಾಗಿ ಗೋಪ್ಯವಾಗಿರಿಸಿ ಸಾಧಾರಣ ಸ್ತ್ರೀಯಂತೆ ವ್ಯವಹರಿಸಿದ ಮಾತೆಯವರನ್ನು ಅವರ ಜೀವನಸಮಯದಲ್ಲಿ ಎಲ್ಲೋ ಕೆಲವರು ಮಾತ್ರ ಅರಿತಿರಬಹುದು. ಕೆಲವರು ಹೀಗೆಯೂ ತಿಳಿದಿದ್ದರು, "ಶ್ರೀರಾಮಕೃಷ್ಣರು ಅವತಾರಪುರುಷರು, ಆದರೆ ಅವರ ಪತ್ನಿ ಒಬ್ಬ ಸಾಧಾರಣ ಮಹಿಳೆ" ಎಂದು. ಆದರೆ ಆ ಮಹಾಶಕ್ತಿಯ ಕೃಪೆಯಿಂದ ಕೆಲವರಿಗೆ ಶ್ರೀಮಾತೆಯವರು ಸಾಧಾರಣ ಮಹಿಳೆ ಅಲ್ಲವೆಂಬ ಬೋಧೆಯಾಗುತ್ತಿತ್ತು. ಶ್ರೀರಾಮಕೃಷ್ಣರು ತಮ್ಮ ದಿವ್ಯತೆಯನ್ನು ಅನೇಕ ತರಹಗಳಲ್ಲಿ ಪ್ರಕಟಿಸಿದ್ದರು. ಅವರ ಸಮೀಪಕ್ಕೆ ಬಂದ ಎಷ್ಟೋ ಭಕ್ತರು, ಯೋಗಿಗಳು, ಪಂಡಿತರು ಅವರನ್ನು ಅವತಾರ ಎಂದು ಅರಿತು ಅವರ ಜೀವಿತಸಮಯದಲ್ಲೇ ಪ್ರಪಂಚಕ್ಕೆ ಹಾಗೆ ಘೋಷಿಸಿದ್ದರು. ಶ್ರೀಶಾರದಾದೇವಿಯವರು ತಮ್ಮ ದಿವ್ಯತೆಯನ್ನು, 'ಮಹಾಶಕ್ತಿಯನ್ನು', ತಮ್ಮ ನಿಜ ಸ್ವರೂಪವನ್ನು ತಾವಾಗಿಯೇ ಪ್ರಕಟಿಸದಿದ್ದರೂ ಅನೇಕ ಸಮಯಗಳಲ್ಲಿ ಅವರ ಎಚ್ಚರವನ್ನು ಮೀರಿ ಅದು ಪ್ರಕಟವಾಗುತ್ತಿತ್ತು. ಆ ಸಮಯದಲ್ಲಿ ಅವರ ಸಂಗಿನಿಯರಾದ ಗೋಲಾಪ್‌ಮಾ, ಯೋಗಿನ್‌ಮಾ, ಮುಂತಾದ ಭಕ್ತಸಾಧಕಿಯರು ಇದನ್ನು ಅರ್ಥ ಮಾಡಿಕೊಂಡಿದ್ದರು. ಆದರೆ ಶ್ರೀಮಾತೆಯವರ ದರ್ಶನಕ್ಕಾಗಿ ಬರುತ್ತಿದ್ದ ಅನೇಕ ಸಾಧಾರಣ ಮಹಿಳೆಯರಲ್ಲೂ ಸಹ ಕೆಲವರು ಶ್ರೀಶಾರದಾದೇವಿ ಸಾಮಾನ್ಯಸ್ತ್ರೀ ಅಲ್ಲವೆಂದೂ, ಭಗವಂತನ ಜೊತೆಯಲ್ಲಿ ಧರೆಗಿಳಿದು ಬಂದಿರುವ ಸಾಕ್ಷಾತ್ ಭಗವತಿಯೆಂದೂ ಅರಿತಿದ್ದರು. ಅಂತಹ ಮಹಿಳೆಯರಲ್ಲಿ ಒಬ್ಬರಾಗಿದ್ದರು ಸರಯೂಬಾಲಾ ಸೇನ್.

ಕಲ್ಕತ್ತ ನಗರದ ಬಾಲಿಗಂಜ್ ಎಂಬ ಕ್ಷೇತ್ರದಲ್ಲಿನ 'ಪಾಟಲ್‌ಡಂಗಾ' ಎಂಬಲ್ಲಿ ಸರಯೂಬಾಲಾರ ನಿವಾಸವಿತ್ತು. ಇವರು ಒಂದು ಸಾಧಾರಣ ಕುಟುಂಬದ ಉತ್ತಮ ಗೃಹಿಣಿಯಾಗಿದ್ದರು. ಇವರ ಬಗ್ಗೆ ಹೆಚ್ಚು ವಿವರಗಳು ನಮಗೆ ದೊರಕದಿದ್ದರೂ ಶ್ರೀಮಾತೆಯವರ ಜೊತೆಯಲ್ಲಿನ ಸಂಪರ್ಕ ಮತ್ತು ಆ ದಿನಗಳ ಕುರಿತ ವಿವರಗಳೆಲ್ಲವೂ "ಮಾಯೇರ್ ಕಥಾ" ಎಂಬ ಬಂಗಾಳಿ ಪುಸ್ತಕದ ಪ್ರಥಮ ಭಾಗದಲ್ಲಿ ಪ್ರಕಟವಾಗಿದೆ. ಇದರಲ್ಲಿ ಇವರು ಸನ್ನಿವೇಶಕ್ಕೆ ಅಗತ್ಯವಿದ್ದಂತೆ ತಮ್ಮ ಸ್ವಂತ ವಿಷಯಗಳನ್ನು ಬರೆದದ್ದಲ್ಲದೆ ಬೇರೆಲ್ಲೂ ಇವರ ಬಗ್ಗೆ ಮಾಹಿತಿಯಿಲ್ಲ. ಸ್ವಂತ ಸಹೋದರಿ ಸುಮತಿಯ ನಿಮಿತ್ತದಿಂದ ಇವರು ಶ್ರೀಮಾತೆಯವರ ದರ್ಶನವನ್ನು ಪ್ರಥಮವಾಗಿ ಪಡೆಯುತ್ತಾರೆ. ಹದಿನಾಲ್ಕು ಹದಿನೈದು ವರುಷಗಳು ಕಲ್ಕತ್ತದಲ್ಲಿದ್ದರೂ ಶ್ರೀಮಾತೆಯ ದರ್ಶನವಾಗಿರಲಿಲ್ಲ. ೧೯೧೧ರ ಜನವರಿಯಲ್ಲಿ ಇವರಿಗೆ ಶ್ರೀಮಾತೆಯವರೊಡನೆ ಪ್ರಥಮ ದರ್ಶನವಾಗುತ್ತದೆ. ಶ್ರೀಶಾರದಾದೇವಿಯವರು ಜೀವನದ ಕೊನೆಯ ಭಾಗವಾದ ಅಂದರೆ ೧೯೧೧ - ೧೯೨೦ ರವರೆಗೆ ಬಾಗ್‌ಬಜಾರಿನ ಉದ್ಬೋಧನ ಕಾರ್ಯಾಲಯದಲ್ಲಿ ವಾಸಿಸುತ್ತಿದ್ದರು. ಮಧ್ಯದಲ್ಲಿ ಕೆಲವು ಸಲ ಜಯರಾಂಬಾಟಿಗೆ ಹೋಗಿದ್ದಲ್ಲದೆ ಕೊನೆಯವರೆಗೆ ಇಲ್ಲೇ ಇದ್ದರು. ಸರಯೂಬಾಲಾರು ೧೯೧೧ರಿಂದ ೧೯೨೦ರವರೆಗೆ ಎಂದರೆ ೯ ವರ್ಷಗಳಲ್ಲಿ ತಮಗೆ ಸಮಯ ಸಿಕ್ಕಾಗಲೆಲ್ಲಾ ಶ್ರೀಮಾತೆಯವರ ದರ್ಶನಕ್ಕೆ ಹೋಗುತ್ತಿದ್ದರು. ಶ್ರೀಮಾತೆಯವರೊಂದಿಗಿದ್ದ ಆ ಅಪೂರ್ವಕ್ಷಣಗಳನ್ನು "ಮಾಯೇರ್ ಕಥಾ" ಎಂಬ ಬಂಗಾಳಿ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಇದು ಇಂಗ್ಲಿಷಿಗೆ ಅನುವಾದಗೊಂಡು *The Gospel of the Holy Mother* ಎಂಬ ಪುಸ್ತಕರೂಪದಲ್ಲಿ ಪ್ರಕಟವಾಗಿದೆ. ಶ್ರೀಮಾತೆಯವರೊಡನೆ ಆದ ಇವರ ಮಾತುಕತೆಗಳನ್ನು ಓದಿದರೆ, ಈ ಮಹಿಳೆ ಶ್ರೀಮಾತೆಯವರಿಗೆ ಎಷ್ಟು ಆತ್ಮೀಯಳಾಗಿದ್ದಳು, ಶ್ರೀಮಾತೆಯವರು ಈ ಮಹಿಳೆಯ ಮೇಲೆ

ಅದೆಷ್ಟು ಅಪಾರ ಕೃಪೆಯನ್ನು ಹರಿಸಿದರು ಹಾಗೂ ಜಗಜ್ಜನನಿಯ ಕೃಪೆಗೆ ಪಾತ್ರಳಾದ ಈಕೆ ಅದೆಷ್ಟು ಧನ್ಯಳು ಎಂಬ ಅಂಶ ನಮಗೆ ಅರಿವಾಗುತ್ತದೆ.

ಶ್ರೀಮಾತೆಯವರೊಡನೆ ತಮ್ಮ ಪ್ರಥಮ ದರ್ಶನದ ಬಗ್ಗೆ ಹೀಗೆ ಬರೆದಿದ್ದಾರೆ : "ಓಹ್, ನಾನು ಹದಿನಾಲ್ಕು ಹದಿನೈದು ವರುಷಗಳಿಂದ ಈ ಕಲ್ಕತ್ತ ನಗರದಲ್ಲಿದ್ದರೂ ಈಗ ಶ್ರೀಮಾತೆ ತಮ್ಮ ದರ್ಶನ ನೀಡಲು ಕೃಪೆ ಮಾಡಿದರೇನು!" ಬರೀ ದರ್ಶನ ವಲ್ಲ. ಆ ಮಹಾಮಾಯೆ ತನ್ನ ದಿವ್ಯಸ್ವರೂಪವನ್ನು ಅರಿಯಲೂ ಕೃಪೆ ಮಾಡಿದರು ಈ ಸರಯೂಬಾಲಾರಿಗೆ. ಪ್ರಥಮ ಭೇಟಿ ಕೆಲವೇ ಕ್ಷಣಗಳಾದರೂ ಅಂದೇ ಶ್ರೀಮಾತೆಯವರ ಸ್ನೇಹ, ಆದರ ಇವರನ್ನು ಬಂಧಿಸಿದವು. ಎರಡನೇ ಸಲ ಹೋದಾಗ ಆಶ್ಚರ್ಯವೆಂದರೆ ಶ್ರೀಮಾತೆಯವರು ಇವರನ್ನು ಕಂಡು ಹೇಳುತ್ತಾರೆ, "ನಿನ್ನನ್ನು ನೋಡಿದರೆ ತುಂಬಾ ದಿನಗಳ ಪರಿಚಯ ದಂತಿದೆ" ಎಂದು. ಅಂತೆಯೇ ಶ್ರೀಮಾತೆಯವರು ಇವರೊಂದಿಗೆ ತುಂಬ ಪರಿಚಿತರಂತೆಯೇ ವ್ಯವಹರಿಸಿದರು. ಆದರೆ ಪಾರಮಾರ್ಥಿಕ ದೃಷ್ಟಿಯಿಂದ ಇದರಲ್ಲಿ ಆಶ್ಚರ್ಯವಾದುದೇನೂ ಇಲ್ಲ. ಕಾರಣ, ಆ ಮಹಾಶಕ್ತಿಯ, ಜಗನ್ಮಾತೆಯ ಅಂಶವಾದ ಈ ಜೀವಿಯದು ಅವರೊಡನೆ ಜನ್ಮಜನ್ಮಾಂತರದ ಸಂಬಂಧ.

ಶ್ರೀಮಾತೆಯವರ ದಿನಚರಿಯಲ್ಲಿ ಅವರೊಂದಿಗೆ ಭಾಗವಹಿಸಿ, ಅವರ ದಿವ್ಯತೆಯನ್ನು ಅರಿತ ಮಹಾಭಾಗ್ಯವಂತೆ ಸರಯೂಬಾಲಾ. ಆ ಮಹಾಮಾಯೆ ತನ್ನ ಮಾಯಾ ಕವಾಟವನ್ನು ಇವರ ಮುಂದೆ ತೆರೆದು ತನ್ನ ನಿಜರೂಪವನ್ನು ತೋರಿಸಿದ್ದರು. ತಮ್ಮ ಅದ್ಭುತಜೀವನದ ಅಸ್ತಮಾನದ ಸಮಯದಲ್ಲಿ ಶ್ರೀಶಾರದಾ ದೇವಿಯವರು ಚಿಕ್ಕ ಬಾಲಿಕೆಯಂತಿದ್ದರು. ಸರಯೂಬಾಲಾ ಜೊತೆ ಆತ್ಮೀಯವಾಗಿ ತಮ್ಮ ಮನಸ್ಸನ್ನು ತೆರೆದು ಇವರಿಗೆ ಎಲ್ಲ ಹೇಳುತ್ತಿದ್ದರು. ಸರಯೂಬಾಲಾರಿಗೆ ಹೊಲಿಗೆ ಗೊತ್ತಿದ್ದರಿಂದ ಬಾಗ್‌ಬಜಾರಿನಲ್ಲಿದ್ದ ಗೌರಿಮಾ ಶಾಲೆಯಲ್ಲಿ ಸೇವೆಸಲ್ಲಿಸಲು ನಿರ್ದೇಶಿಸಿದರು. ಶ್ರೀಮಾತೆಯವರ ಸಲಹೆಯಂತೆ ನಿತ್ಯವೂ ಆ ಶಾಲೆಗೆ ಹೋಗುತ್ತಿದ್ದರು. ಶಾಲೆ ಮುಗಿದನಂತರ ಸಂಜೆ ಸಮಯದಲ್ಲಿ ನಿತ್ಯವೂ ಶ್ರೀಮಾತೆಯವರ ದರ್ಶನಕ್ಕೆಂದು ಬರುತ್ತಿದ್ದರು. ಸಾಮಾನ್ಯವಾಗಿ ರಾತ್ರಿ ೧೧ ಘಂಟೆಯವರೆಗೆ ಶ್ರೀಮಾತೆಯವರ ಜೊತೆಯಲ್ಲಿರುತ್ತಿದ್ದರು. ಶ್ರೀಮಾತೆಯವ ರೊಂದಿಗೆ ಗಂಗಾಸ್ನಾನ, ಊಟ, ತಿಂಡಿ, ನಿದ್ರೆ ಮುಂತಾದ ದಿನ ಚರಿಯಲ್ಲಿ ಪಾಲ್ಗೊಳ್ಳುತ್ತಿದ್ದರು. ವಯಸ್ಸಾದಂತೆ ಶ್ರೀಮಾತೆಯವರ ಆರೋಗ್ಯದಲ್ಲಿ ಏರುಪೇರಾಗುತ್ತಿತ್ತು. ಜೊತೆಗೆ ವಾತದ ರೋಗ ಬೇರೆ. ವಾತದ ನೋವಿನ ಶಮನಕ್ಕಾಗಿ ಅವರ ಶರೀರಕ್ಕೆ ಮದ್ದಿನ ಎಣ್ಣೆ ಸವರುತ್ತಿದ್ದರು. ಹೀಗೆ ಶ್ರೀಮಾತೆಯವರೊಡನೆ ಅತ್ಯಂತ ನಿಕಟವಾಗಿ ಬೆರೆತು ಅವರ ವೈಯಕ್ತಿಕ ಕೆಲಸಗಳನ್ನು ಮಾಡಿಕೊಡು ತ್ತಿದ್ದರು. ಭಕ್ತರಿಗೆ ಪತ್ರಗಳನ್ನು ಬರೆಯಲು, ಪುಸ್ತಕಗಳನ್ನು ಓದಲು ಶ್ರೀಮಾತೆಯವರು ಇವರ ನೆರವನ್ನು ಪಡೆಯುತ್ತಿದ್ದರು. ಬಜಾರಿನಿಂದ ತಮಗೆ ಅಗತ್ಯವಿದ್ದ ವಸ್ತುಗಳನ್ನು ಶ್ರೀಮಾತೆ ಯವರು ಇವರಿಂದ ತರಿಸಿಕೊಳ್ಳುತ್ತಿದ್ದರು.

**ಮಾತೃರೂಪವನ್ನು ಧರಿಸಿ ಬಂದ ಆ ಲೋಕಜನನಿ ಯಾದ ಶ್ರೀಶಾರದಾದೇವಿಯವರು ಜೀವಿಗಳ ಉದ್ಧಾರ ಕ್ಕಾಗಿಯೇ ಪರಿತಪಿಸುತ್ತಿರುವುದು ಅವರ ಜೀವನದ ಕೊನೆಯ ಭಾಗದಲ್ಲಿ ಸುಸ್ಪಷ್ಟವಾಗಿತ್ತು.**

ಸರಯೂಬಾಲಾರೊಂದಿಗೆ ಅಷ್ಟೊಂದು ನಿಕಟವಾಗಿ ವರ್ತಿ ಸಿದರೂ ಶ್ರೀಮಾತೆಯವರ ಆಧ್ಯಾತ್ಮಿಕ ಮೇರುವ್ಯಕ್ತಿತ್ವ ಅವರ ವರ್ತನೆಯಲ್ಲಿ ಸ್ಪಷ್ಟವಾಗಿ ಕಾಣುತ್ತಿತ್ತು ಎಂಬುದನ್ನು ಸರಯೂ ಬಾಲಾರ ವರ್ಣನೆಯಲ್ಲಿ ಕಾಣಬಹುದು : "ಶ್ರೀಮಾತೆಯವರು ತುಂಬ ಸರಳವಾಗಿ ವ್ಯವಹರಿಸುತ್ತಿದ್ದರೂ ನಮಗೂ ಅವರಿಗೂ ತುಂಬಾ ಅಂತರದ ಅನುಭವವಾಗುತ್ತಿತ್ತು. ಕೆಲವು ಶ್ರೀಮಾತೆ ಯವರು ತುಂಬ ಗಂಭೀರವಾಗಿರುತ್ತಿದ್ದರು. ಅಂಥ ಸಮಯದಲ್ಲಿ ಅವರ ಬಳಿಗೆ ಹೋಗಲು ಸ್ವಲ್ಪ ಭಯವೇ ಆಗುತ್ತಿತ್ತು. ಮಾತೃರೂಪವನ್ನು ಧರಿಸಿ ಬಂದ ಆ ಲೋಕಜನನಿಯಾದ ಶ್ರೀಶಾರದಾದೇವಿಯವರು ಜೀವಿಗಳ ಉದ್ಧಾರಕ್ಕಾಗಿಯೇ ಪರಿ ತಪಿಸುತ್ತಿರುವುದು ಅವರ ಜೀವನದ ಕೊನೆಯ ಭಾಗದಲ್ಲಿ ಸುಸ್ಪಷ್ಟ ವಾಗಿತ್ತು. ತಮ್ಮ ಆರೋಗ್ಯದ ಕಡೆಗೆ ಗಮನವೀಯದೆ ಯಾರು ಬಂದರೂ ಮುಕ್ತಹಸ್ತದಿಂದ ಅವರೆಲ್ಲರನ್ನೂ ಹರಸುತ್ತಿದ್ದರು."

ಸರಯೂಬಾಲಾರು ಶ್ರೀಮಾತೆಯವರ ದರ್ಶನಕ್ಕೆ ಹೋದಾಗ ಲೆಲ್ಲ ಒಂದು ನಿಮಿಷವೂ ಅಗಲಿರದೆ ಅವರ ಜೊತೆಯಲ್ಲೇ ಇರುತ್ತಿದ್ದರು. ಆದುದರಿಂದ ಶ್ರೀಮಾತೆಯವರಲ್ಲಿಗೆ ಬರುವ ಭಕ್ತರ ಜೊತೆಯಲ್ಲಿ ನಡೆದ ಎಲ್ಲ ಸಂಭಾಷಣೆಗಳಿಗೆ ಇವರು ಸಾಕ್ಷಿಯಾಗಿದ್ದರು. ಸಾಧಾರಣ ಮಹಿಳೆಯರಿಗೆ ನೀಡಿದ ಉಪ ದೇಶ, ಭಕ್ತೆಯರಿಗೆ ಕೊಟ್ಟ ಸಲಹೆಗಳು, ಸಂನ್ಯಾಸಿಗಳಿಗೆ ನೀಡಿದ ಮಾರ್ಗದರ್ಶನ—ಈ ಎಲ್ಲ ಸಂದರ್ಭಗಳಲ್ಲೂ ಉಪಸ್ಥಿತರಿರುವ ಅಪೂರ್ವ ಸುಯೋಗ ಇವರಿಗೊದಗಿತ್ತು. ಹೀಗಾಗಿ ತಮ್ಮ "ಮಾಯೇರ್ ಕಥಾ" ದಲ್ಲಿ ತಾವು ಕಂಡು ಕೇಳಿದ್ದೆಲ್ಲವನ್ನೂ ಬರೆದಿದ್ದಾರೆ.

ಶ್ರೀಮಾತೆಯವರು ತಮ್ಮ ಜೀವಿತಕಾಲದಲ್ಲಿಯೇ ಅನೇಕ ಬಾರಿ ಆಕಸ್ಮಿಕವೆಂಬಂತೆ ತಮ್ಮ ದಿವ್ಯರೂಪವನ್ನು ಪ್ರಕಟಿಸಿದ್ದಾರೆ. ನಿಜವಾಗಿಯೂ ತಾವು ಯಾರೆಂದು ತಮ್ಮೊಡನೆ ಇದ್ದವರಿಗೆ ಕಾಣಿಸಿಕೊಂಡಿದ್ದಾರೆ. ಸರಯೂಬಾಲಾರು ಸಹ, ತಮಗೆ ಲಭ್ಯವಾದ ಮಂತ್ರದೀಕ್ಷೆಯ ಸನ್ನಿವೇಶವನ್ನು ನೆನೆಸುತ್ತಾ ತಮಗಾದ ಅನುಭವವನ್ನು ಹೀಗೆ ವರ್ಣಿಸಿರುತ್ತಾರೆ: "ಅಂದು ಶ್ರೀಮಾತೆ ಯವರು ಎಂದಿನಂತಿರಲಿಲ್ಲ. ನನಗೂ ಅವರಿಗೂ ಅದೆಷ್ಟೋ ಅಂತರ. ಸಮೀಪ ಹೋಗಲು ಭಯವಾಯಿತು. ಅವರ ನಿರ್ದೇಶ ದಂತೆ ದೇವರ ಮನೆಗೆ ಹೋಗಿ ಅವರ ಮುಂದೆ ಕುಳಿತು ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡಿದೆ. ಮಂತ್ರದೀಕ್ಷೆಯೂ ನಡೆ ಯಿತು. ಆಗ ಅವರು ಯಾವುದೋ ಅಲೌಕಿಕ ಭಾವದಲ್ಲಿರುವುದು ಅನುಭವವಾಯಿತು. ಎಲ್ಲ ಮುಗಿದ ಮೇಲೆ ನಿತ್ಯದಂತೆ ಅವರ ಜೊತೆಯಲ್ಲಿ ಆಹಾರ ತೆಗೆದುಕೊಳ್ಳಲು ಕುಳಿತೆ. ಆಗಲೂ

ಶ್ರೀಮಾತೆಯವರು ಅದೇ ಉನ್ನತ ಭಾವದಲ್ಲಿದ್ದರು. ತಾವು ಸ್ವಲ್ಪ ಆಹಾರವನ್ನು ತೆಗೆದುಕೊಂಡಮೇಲೆ ತಮ್ಮ ಪ್ರಸಾದವನ್ನು ನನಗೆ ನೀಡಿದರು. ಅದ್ಭುತವೆಂದರೆ ಆ ಪ್ರಸಾದವು ವಿವರಿಸಲು ಅಸಾಧ್ಯವಾದ ಒಂದು ಅಪೂರ್ವ ಸುಗಂಧದಿಂದ ಕೂಡಿತ್ತು."

ಮತ್ತೊಂದು ದಿನ ಶ್ರೀಮಾತೆಯವರು ಮಾತುಕತೆಗಳ ಮಧ್ಯದಲ್ಲಿ ಅಲ್ಲಿದ್ದ ಸರಯೂಬಾಲಾ ಮತ್ತು ಇನ್ನಿತರ ಭಕ್ತರಿಗೆ ಹೇಳಿದರು, "ಓಹ್, ನೀವೆಲ್ಲ ಶ್ರೀರಾಮಕೃಷ್ಣರನ್ನು ನೋಡಿಲ್ಲ!" ಎಂದು. ಅದಕ್ಕುತ್ತರವಾಗಿ ಸರಯೂಬಾಲಾ "ಆದರೇನಂತೆ. ನಾವೆಲ್ಲ ತಮ್ಮ ದರ್ಶನವನ್ನಂತೂ ಪಡೆದಿದ್ದೇವೆ" ಎಂದರು. ಅದಕ್ಕೆ ಶ್ರೀಮಾತೆಯವರು "ಅದೇನೋ ಸರಿ" ಎಂದು ಹೇಳಿದರು. ಈ ಮುಂಚೆ ಯಾರೇ ಭಕ್ತರು ಹೀಗೆ ಹೇಳಿದರೆ ವಿರೋಧಿಸುತ್ತಿದ್ದ ಶ್ರೀಮಾತೆಯವರು ಇಂದು ಈ ರೀತಿ ಹೇಳುತ್ತಿರುವುದನ್ನು ನೋಡಿ ಎಲ್ಲರೂ ಆಶ್ಚರ್ಯಪಟ್ಟರು.

ಒಂದು ದಿನ ಸರಯೂಬಾಲಾ ಬೆಳಗ್ಗೆ ಪೂಜೆಗಾಗಿ ಹೂವುಗಳನ್ನು ತೆಗೆದುಕೊಂಡು ಶ್ರೀಮಾತೆಯವರ ದರ್ಶನಕ್ಕೆ ಹೋದರು. ಶ್ರೀಮಾತೆಯವರು ಅವುಗಳನ್ನು ತೆಗೆದುಕೊಂಡು ಶ್ರೀರಾಮಕೃಷ್ಣರ ಪೂಜೆ ಶುರುಮಾಡಿದರು. ಕೊನೆಗೆ ಸ್ವಲ್ಪ ಹೂವುಗಳನ್ನು ಬದಿಗಿರಿಸಿ ಎಲ್ಲ ಮುಗಿದಮೇಲೆ ಹೊರಗೆ ಬಂದು ಸರಯೂಬಾಲಾರಿಗೆ ಹೂವುಗಳನ್ನು ಕೊಟ್ಟು ತಮ್ಮ ಪಾದಪೂಜೆ ಮಾಡಲು ಹೇಳಿದರು. ಎಂಥ ಅಪೂರ್ವ ಸುಯೋಗ ಸರಯೂಬಾಲಾರಿಗೆ !

ಒಮ್ಮೆ ಅಕ್ಷಯ ತೃತೀಯ ದಿನದಂದು ಸರಯೂಬಾಲಾ ಮತ್ತು ಅಲ್ಲಿದ್ದ ಉಳಿದ ಭಕ್ತರಿಗೆ ಶ್ರೀಮಾತೆಯವರು "ನಿಮಗೆಲ್ಲ ಮುಕ್ತಿ ಲಭಿಸಲಿ ಎಂದು ಈ ದಿನ ನಿಮಗೆ ಹರಸುತ್ತೇನೆ" ಎಂದು ಹೇಳಿದರು.

ಅದೊಂದು ದಿನ ಸರಯೂಬಾಲಾರ ಜೀವನದಲ್ಲಿ ಒಂದು ವಿಶೇಷ ಸೌಭಾಗ್ಯದ ದಿನ. ಅಂದು ಜಗನ್ಮಾತೆ ತಮ್ಮ ಅಪಾರ ಕೃಪೆಯನ್ನು ನೀಡಲು ಬಾಲಿಗಂಜಿನಲ್ಲಿರುವ ಸರಯೂಬಾಲಾರ ನಿವಾಸಕ್ಕೆ ಭೇಟಿಕೊಟ್ಟರು. ತಮ್ಮ ವಸತಿಯಲ್ಲಿ ಶ್ರೀಮಾತೆಯವರನ್ನು ಸ್ವಾಗತಿಸಿ, ಪೂಜಿಸಿ, ಧನ್ಯೆಯಾದರು ಸರಯೂಬಾಲಾ! ಶ್ರೀಮಾತೆಯವರೂ ಚಿಕ್ಕ ಬಾಲಕಿಯಂತೆ ಅವರ ಮನೆಯ ಎಲ್ಲ ಕಡೆ ನಡೆದು ಮನೆಯ ಸಜ್ಜನ್ನು ನೋಡಿ ಆನಂದಿಸಿ ಅವರನ್ನು ಹರಸಿದರು.

ಶ್ರೀಮಾತೆಯವರು ತಾವು ಸ್ವತಃ ಒಂದು ಗೃಹಿಣಿಯ ಧರ್ಮವನ್ನು ಅನುಸರಿಸಿ ಗೃಹಸ್ಥಧರ್ಮವನ್ನು ಎಲ್ಲ ಗೃಹಿಣಿಯರಿಗೆ ತೋರಿಸಿಕೊಟ್ಟಿದ್ದಾರೆ. ಅವರ ಸಮೀಪಕ್ಕೆ ಬಂದ ಎಲ್ಲ ಗೃಹಿಣಿಯರಿಗೆ ಬೇಕಾದ ಸಲಹೆಗಳನ್ನು ನೀಡಿ ಅವರನ್ನು ಉದ್ಧರಿಸಿದ್ದಾರೆ. ಸರಯೂಬಾಲಾರಂತಹ ಅನೇಕ ಮಹಿಳೆಯರು ಶ್ರೀಮಾತೆಯವರ ಸಂಪರ್ಕದಿಂದ ತಾವು ಉತ್ತಮ ಗೃಹಿಣಿಯರಾಗಿ ಜೀವನ ನಡೆಸಿದರು. ಶ್ರೀಮಾತೆಯವರು ಆ ಭಕ್ತರಿಗೆ ಗಾರ್ಹಸ್ಥ್ಯ ಧರ್ಮದೊಂದಿಗೆ ಆಧ್ಯಾತ್ಮಿಕವಾಗಿ ಮುಂದುವರಿಯಲು ಸಹಾಯ ಮಾಡಿದರು.

೧೯೧೯-೧೯೨೦ರಲ್ಲಿ ಶ್ರೀಶಾರದಾದೇವಿಯವರ ಅಂತ್ಯ ಲೀಲೆಯ ದಿನಗಳು. ಆಗಲೂ ಸರಯೂಬಾಲಾ ಆ ದಿನಗಳಿಗೆ ಮುಗ್ಧ ಸಾಕ್ಷಿಯಾಗಿದ್ದರು. ಮಾತೆಯ ಆದರ್ಶವನ್ನು ತೋರಿಸಲು ಬಂದ ಆ ಜಗಜ್ಜನನಿಯು ಆ ದಿನಗಳಲ್ಲಿ ತಮ್ಮ ಹತ್ತಿರ ಬರುತ್ತಿರುವ ಜ್ಞಾನಿ, ಅಜ್ಞಾನಿ, ಪಾಪಿ, ಪುಣ್ಯಾತ್ಮ, ಭಕ್ತರು, ನಾಸ್ತಿಕರು ಎಲ್ಲರನ್ನೂ ತಮ್ಮ ಅಪಾರ ಕೃಪೆಯಿಂದ ಹರಸಿ ಉದ್ಧರಿಸಿದರು. ಆ ಸಮಯದ ಅವರ ಆ ಸ್ವರೂಪವನ್ನು ಅರಿಯುವುದು ಸಾಧಾರಣ ಮನುಷ್ಯರಿಗೆ ಅಸಾಧ್ಯವಾದದ್ದು. ಸರಯೂಬಾಲಾರು ಈ ಲೀಲೆಯನ್ನು ಮುಗ್ಧರಾಗಿ ನೋಡುತ್ತಾರೆ. ಆದರೆ ಸಂಸಾರತಾಪತ್ರಯಗಳಿಂದಾಗಿ ಶ್ರೀಮಾತೆಯವರ ಕೊನೆಯ ದಿನಗಳಲ್ಲಿ ಅವರನ್ನು ಅನೇಕ ಬಾರಿ ಬಂದು ನೋಡಲು ಆಗುತ್ತಿರಲಿಲ್ಲ. ಶ್ರೀಮಾತೆಯವರ ಮಹಾಸಮಾಧಿಯ ಕೆಲವು ದಿನಗಳ ಹಿಂದೆ ಒಂದು ದಿನ ಹೋದಾಗ ಶ್ರೀಮಾತೆಯವರು ತುಂಬ ಅಸ್ವಸ್ಥರಾಗಿದ್ದರು. ಮಾತನಾಡಲೂ ಅಸಾಧ್ಯವಾಗಿತ್ತು. ಸರಯೂಬಾಲಾರಿಗೆ ತನ್ನ ಜೀವನದ ರತ್ನವನ್ನು ಕಳೆದುಕೊಳ್ಳುತ್ತಿದ್ದೇನೆಂದು ತಿಳಿಯಿತು. ನಿರಾಶೆಯಿಂದಲೇ ಅಂದು ಮನೆಗೆ ತೆರಳಿದರು. ಅದೇ ಅವರ ಕೊನೆಯ ದರ್ಶನವಾಗಿತ್ತು. ಆದರೆ ಅವರ ಅಂತರ್ಯದಲ್ಲಿ, ಹೃದಯಸಿಂಹಾಸನದಲ್ಲಿ ಗುರುವೂ, ಇಷ್ಟ ದೇವತೆಯೂ ಆಗಿ ಶ್ರೀಮಾತೆಯವರು ಎಂದೆಂದಿಗೂ ನೆಲೆಸಿದರು.

ಸರಯೂಬಾಲಾರ ಜೀವನವು ಎಲ್ಲ ಗೃಹಿಣಿಯರಿಗೆ ಒಂದು ಉತ್ತಮ ನಿದರ್ಶನವಾಗಿದೆ. ಶ್ರೀಮಾತೆಯವರು ಈಗ ನಮ್ಮೊಡನೆ ಇಲ್ಲದಿದ್ದರೂ, ಶ್ರೀಮಾತೆಯವರಲ್ಲಿ ಅನುರಕ್ತರಾದರೆ ಈಗಲೂ ಸರಯೂಬಾಲಾರಂತೆ ಶ್ರೀಮಾತೆಯವರ ಅನುಗ್ರಹಕ್ಕೆ ಪಾತ್ರರಾಗಬಹುದು. ದಯಾಮಯಿಯೂ, ಪತಿತೋದ್ಧಾರಿಣಿಯೂ ಆದ, ಮೃದುಹಾಸ್ಯವದನೆಯಾದ ಆ ಮಹಾದೇವಿ ಶ್ರೀಮಾತೆಯವರು ಸರಯೂಬಾಲಾರ ಹೃದಯದಲ್ಲಿ ವಿರಾಜಿಸಿದಂತೆ ಎಲ್ಲ ಗೃಹಿಣಿಯರ ಹೃದಯದಲ್ಲಿ ವಿರಾಜಿಸುತ್ತಾ ಅಭಯದಾತೆಯಾಗಿ ಅವರ ಬಾಳಿನ ಭರವಸೆಯಾಗಿರುವರು.

◆

ಶ್ರೀಮಾತೆ ಶಾರದಾದೇವಿಯವರು ಉದ್ಬೋಧನದಲ್ಲಿರುವಾಗ ಒಬ್ಬ ಭಕ್ತನು ಅವರಿಗೆ ಪ್ರಣಾಮ ಮಾಡುತ್ತಾ ಜೋರಾಗಿ ತನ್ನ ತಲೆಯನ್ನು ಅವರ ಬೆರಳಿನ ಮೇಲೆ ಕುಟ್ಟಿದ. ಶ್ರೀಮಾತೆಯವರು ನೋವಿನಿಂದ 'ಆಹ್' ಎಂದರು. ಹತ್ತಿರದಲ್ಲಿದ್ದವರು ಅವನ ಆ ರೀತಿಯ ವರ್ತನೆಗೆ ಕಾರಣವನ್ನು ಕೇಳಿದಾಗ ಅವನು ಕೊಟ್ಟ ವಿವರಣೆ ವಿಚಿತ್ರವಾಗಿದೆ : 'ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ಅವರ ಕಾಲನ್ನು ನೋಯಿಸಿದೆ. ಎಷ್ಟು ದಿನ ಆ ನೋವಿರುವುದೋ ಅಷ್ಟೂ ದಿನ ಅವರು ನನ್ನನ್ನು ನೆನಪಿಸಿಕೊಳ್ಳುತ್ತಿರುತ್ತಾರೆ.' ಅನುಚರರು ತಮ್ಮ ಕಾಲು ಒತ್ತುತ್ತಿರುವಾಗ ಶ್ರೀಮಾತೆಯವರು ಇಂತಹ ಕತೆಗಳನ್ನು ಹೇಳಿ ಅವರನ್ನು ನಗಿಸಿ ತಾವೂ ನಗುತ್ತಿದ್ದರು.